ವರ್ಷಗಳಿಂದ ಹೋಗಿ ಅಲ್ಲೆಲ್ಲಾ ನೆಲೆಯಾಗಿದ್ದಾರೆ ಅವರನ್ನು ಏಕಾಏಕಿ ಆಚೆಗೆ ಹಾಕಲಿಕ್ಕೆ ನಾವು ಬಿಡುವುದಕ್ಕಾಗುವುದಿಲ್ಲ ಆದ್ದರಿಂದ ಅವರನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ಎಲ್ಲಾ ರೀತಿಯ ಕ್ರಮಗಳನ್ನೂ ಸಹಿತ ತೆಗೆದುಕೊಳ್ಳುತ್ತದೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸರ್ಕಾರ ಅದರ ಬಗ್ಗೆ ನಾವು ಗಮನವನ್ನು ಹರಿಸಿದ್ದೇವೆ ನಿಗಾವನ್ನು ಇಟ್ಟಿದ್ದೇವೆ ಅಗತ್ಯಬಿದ್ದಲ್ಲಿ ತಮ್ಮನ್ನೂ ಸಹಿತ ವಿಶ್ವಾಸಕ್ಕೆ ತೆಗೆದುಕೊಂಡು ಸರ್ವಪಕ್ಷದವರನ್ನೂ ಸಹಿತ ಕರೆಸಿ ಇದರ ಬಗ್ಗೆ ಅವರ ಅಭಿಪ್ರಾಯಗಳನ್ನೂ ಸಹಿತ ತೆಗೆದುಕೊಂಡು ನಿಮ್ಮನ್ನೂ ಸಹಿತ ಕರೆಸಿ, ಬೇರೆ ಬೇರೆ ಪಕ್ಷದ ಮುಖಂಡರುಗಳನ್ನೂ ಸಹಿತ ಕರೆಸಿ ನಮ್ಮ ಸರ್ಕಾರ ನಿಮ್ಮ ಅಭಿಪ್ರಾಯದ ಮೇರೆಗೆ ನಾವು ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಬದ್ಧವಾಗಿದ್ದೇವೆ ಎನ್ನುವ ಭರವಸೆಯನ್ನು ಈ ಸಭೆಯ ಮೂಲಕ ತಮಗೆ ಮತ್ತು ಗೌರವಾನ್ವಿತ ಸದಸ್ಯರುಗಳಿಗೆ ನಾನು ಕೊಡುತ್ತೇನೆ

6 ಪ್ರಕಟಣೆ

ಛೇರ್ಮನ್ ಹನ್ನೆರಡನೇ ವಿಧಾನಸಭೆಯಲ್ಲಿ ನಡೆದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹನ್ನೆರಡನೇ ವಿಧಾನ ಸಭೆಯ ಪ್ರಥಮ ಅಧಿವೇಶನವು ದಿನಾಂಕ 9ನೇ ಜೂನ್, 2004 ರಿಂದ 18ನೇ ಜೂನ್, 2004 ರವರೆಗೆ ಹಾಗೂ 28ನೇ ಜೂನ್, 2004 ರಂದು ಸಮಾವೇಶಗೊಂಡು ಒಟ್ಟು 9 ದಿನಗಳು ಕಾರ್ಯಕಲಾಪಗಳನ್ನು ನಡೆಸಿ 26 38+5 30=32 08 ಗಂಟೆಗಳು ನಿಮಿಷಗಳ ಕಾಲ ಸಭೆಯನ್ನು ನಡೆಸಿರುತ್ತದೆ

ಅಧಿವೇಶನದ ಪ್ರಾರಂಭದ ದಿನವಾದ 09 06 2004ರಂದು ಹನ್ನೆರಡನೇ ವಿಧಾನ ಸಭೆಗೆ ಚುನಾಯಿತರಾದ 177 ಸದಸ್ಯರುಗಳು ಹಾಗೂ ದಿನಾಂಕ 10 06 2004 ರಂದು 44 ಸದಸ್ಯರು, ಹಂಗಾಮಿ ಸಭಾಧ್ಯಕ್ಷರ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದರು ದಿನಾಂಕ 14 06 2004 ರಂದು 3 ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದರು. ಹಾಗೂ ನಾಮ ನಿರ್ದೇಶನಗೊಂಡ ಸದಸ್ಯರಾದ ಶ್ರೀ ಐವಾನ್ ನಿಗ್ಲಿ ಅವರು ಇಂದು ಪ್ರಮಾಣ ವಷನ ಸ್ವೀಕರಿಸಿದರು

ದಿನಾಂಕ 11ನೇ ಜೂನ್, 2004 ರಂದು ಕರ್ನಾಟಕದ ಘನತೆವೆತ್ತ ರಾಜ್ಯಪಾಲರು ಜಂಟಿ ಸದನವನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ ರಾಜ್ಯಪಾಲರ ಭಾಷಣದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆಯಾಗದೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ನೀಡುವ ಮೂಲಕ ವಂದನಾರ್ಪಣಾ ನಿರ್ಣಯವನ್ನು ಸದನವು ಅಂಗೀಕರಿಸಿದೆ

ಇತ್ತೀಚೆಗೆ ನಿಧನರಾದ ವಿಧಾನಸಭೆಯ ಮಾಜಿ ಸದಸ್ಯರುಗಳಾದ ಹಾಗೂ ಸಚಿವರಾಗಿದ್ದ ಶ್ರೀ ಜಿ ರಾಜುಗೌಡ, ಶ್ರೀ ಡಿ ಬಿ ಕಲ್ಮಠ್‌ಕರ್, ಶ್ರೀ ಪಿ ವೆಂಕಟರಮಣ ಹಾಗೂ ಮಾಜಿ ಸದಸ್ಯರಾದ ಶ್ರೀ ಎನ್ ಗಂಗಾಧರ್, ಶ್ರೀ ಎಂ ಜಿ ಜರತಾರಘರ ಹಾಗೂ ಚಲನಚಿತ್ರ ತಾರೆ ಶ್ರೀಮತಿ ಸೌಂದರ್ಯ ಹಾಗೂ ಇತರ ಮೂವರು ಲಘ ವಿಮಾನ ಅಪಘಾತದಲ್ಲಿ ಮರಣ ಹೊಂದಿರುವ ಮೃತರ ಗೌರವಾರ್ಥ ಸಂತಾಪ ಸೂಚನಾ ನಿರ್ಣಯವನ್ನು ಅಂಗೀಕರಿಸಲಾಗಿದೆ

ನಿಯಮ 60ರ ಮೇರೆಗೆ ಬರಗಾಲ ಪೀಡಿತ ಪ್ರದೇಶಗಳಲ್ಲಿ "ಕೂಲಿಗಾಗಿ ಕಾಳು" ಯೋಜನೆಯಡಿಯಲ್ಲಿ ರಾಜ್ಯದಲ್ಲಿ ಬಡ ಕೂಲಿ ಕಾರ್ಮಿಕರಿಗೆ ಹಂಚಲೆಂದು ಮೀಸಲಾದ ಅಕ್ಕಿಯು ಅವರಿಗೆ ತಲುಪದೇ ದೊಡ್ಡ ಹಗರಣವಾಗಿರುವ ನಿಲುವಳಿ ಸೂಚನೆಯನ್ನು ಸ್ವೀಕರಿಸಿದ್ದು, ಮಾನ್ಯ ಸದಸ್ಯರುಗಳಿಗೆ ಪ್ರಾರಂಭಿಕವಾಗಿ ಪ್ರಸ್ತಾಪಿಸಲು ಅವಕಾಶ ನೀಡಿ, ನಿಯಮ 69ರ ರನ್ನಾಗಿ ಪರಿವರ್ತಿಸಿ

ಚರ್ಚಿಸಲು ಅವಕಾಶ ಕಲ್ಪಿಸಲಾಯಿತು ಅಲ್ಲದೆ, 69ನೇ ನಿಯಮದಡಿಯಲ್ಲಿ ಮೂರು ಸೂಚನೆಗಳನ್ನು ಸ್ವೀಕರಿಸಿದ್ದು, ಚರ್ಚೆಗೆ ಅವಕಾಶ ನೀಡಲಾಯಿತು

ಪ್ರಸಕ್ತ ಅಧಿವೇಶನದಲ್ಲಿ 107 ಕಾಗದ ಪತ್ರಗಳನ್ನು ಸಭೆಯು ಮುಂದೆ ಮಂಡಿಸಲಾಗಿರುತ್ತದೆ ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಾವಳಿಗಳಂತೆ 2004–2005ನೇ ಸಾಲಿನ ಸ್ಥಾಯಿ ಸಮಿತಿಗಳಿಗೆ ಮತ್ತು ಅನಾಥಾಲಯ ಹಾಗೂ ಧರ್ಮಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡಲು ಸದನವು ಸಭಾಧ್ಯಕ್ಷರಿಗೆ ಅಧಿಕಾರವನ್ನು ವಹಿಸಿದೆ ಈ ಅವಧಿಯಲ್ಲಿ ಭಾರತದ ಲೆಕ್ಕಪತ್ರ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ದಿನಾಂಕ 31ನೇ ಮಾರ್ಚ್ 2003ಕ್ಕೆ ಕೊನೆಗೊಂಡ ವಾಣಿಜ್ಯ ವರದಿಯನ್ನು ಸದನದಲ್ಲಿ ಮಂಡಿಸಲಾಗಿದೆ

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ನನ್ನೊಡನೆ ಸಹಕರಿಸಿದ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳೀಗೂ, ವಿರೋಧ ಪಕ್ಷದ ನಾಯಕರಿಗೂ, ಸಚಿವ ಸಂಪುಟದ ಸದಸ್ಯರುಗಳಿಗೂ, ವಿವಿಧ ಪಕ್ಷಗಳ ನಾಯಕರುಗಳಿಗೂ, ವಿಧಾನ ಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೂ, ಪತ್ರಕರ್ತರಿಗೂ, ಆಕಾಶವಾಣಿ ಮತ್ತು ಎಲ್ಲಾ ದೂರದರ್ಶನ ಮಾಧ್ಯಮಗಳಿಗೂ, ಅಂತರ್ಜಾಲದಲ್ಲಿ ಬರಲು ಸಹಕರಿಸಿದ ಮಾಧ್ಯಮಗಳಿಗೂ, ವಿವಿಧ ಇಲಾಖಾ ಅಧಿಕಾರಿಗಳು ಹಾಗೂ ವಿಶೇಷವಾಗಿ ಕರ್ನಾಟಕ ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ

ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತೇನೆ

(ಸದನವು 5 50 ಘಂಟೆಗೆ ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು)

ಮುದ್ರಕರು ನಿರ್ದೇಶಕರು ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು
ಸಜಿಮುತು ಕಾಸೂ 109 350 ಪುಸ್ತಕಗಳು ದಿನಾಂಕ 03-09-2005

†ಈ ಚಿಹ್ನೆ ಮಾನ್ಯ ಸದಸ್ಯರ ಅಪ್ಪಣೆ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತೆವೆ